**ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಓದು, ಬರಹ ಬರುವುದಿಲ್ಲ. ಪ್ರತಿವಾದಿಯ ನನ್ನ ಜಾಗವನ್ನು ಒತ್ತುವರಿ ಮಾಡಿರುತ್ತಾರೆಂದು ಈ ಪ್ರಕರಣವನ್ನು ದಾಖಲಿಸಿರುತ್ತೇನೆ. ದಾವಾಸ್ವತ್ತು ನನ್ನದು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾಸ್ವತ್ತು ಪೂರ್ವ-ಪಶ್ಚಿಮಕ್ಕೆಃ 40 ಅಡಿ ಹಾಗೂ ಉತ್ತರ-ದಕ್ಷಿಣಕ್ಕೆಃ 40 ಅಡಿ ಇರುತ್ತದೆ. ಸ್ವತ್ತಿನಲ್ಲಿ ಮನೆಯನ್ನು ಮುಂಭಾಗದಲ್ಲಿ ಕಟ್ಟಿಕೊಂಡಿದ್ದು ಹಿಂದಿನ ಜಾಗವನ್ನು ಖಾಲಿ ಬಿಟ್ಟಿರುತ್ತೇನೆ. ಪ್ರತಿವಾದಿಯು 20 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಪ್ರತಿವಾದಿಯು ದಾವಾಸ್ವತ್ತಿನ ಪಶ್ಚಿಮದ ಕಡೆ ಇದ್ದ ಖಾಲಿ ಜಾಗದಲಿಲ್ಲಿ ದನಕರುಗಳು ಕಟ್ಟಿಕೊಳ್ಳುತ್ತಿದ್ದರು. ಪ್ರತಿವಾದಿ ಹಾಗೂ ಅವರ ತಂದೆಯು ನನ್ನ ಖಾಲಿ ಜಾಗದ ಪಕ್ಕದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರು.

ಖಾಲಿ ಜಾಗ ನನ್ನದು ಎಂದು ತೋರಿಸಲು ತಳವಾರ ಇನಾಂತಿ ಜಾಗವನ್ನು ಆಗಿರುತ್ತದೆ. ದಾವಾಸ್ವತ್ತು ನನ್ನ ತಾತನವರಿಂದ ಬಂದಂತಹ ಸ್ವತ್ತಾಗಿರುತ್ತದೆ. ದಾವಾಸ್ವತ್ತು ನಮ್ಮ ತಂದೆಯವರಿಗೆ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಿಭಾಗಪತ್ರವು ನೊಂದಣಿ ಆಗಿರುತ್ತದೆ. ಅದನ್ನೂ ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಿಭಾಗಪತ್ರವನ್ನು ನಾವು ಸುಳ್ಳು ಸೃಷ್ಟಿಸಿಕೊಂಡಿರುತ್ತೇವೆ ಆ ಕಾರಣಕ್ಕಾಗಿ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗದಪತ್ರದಲ್ಲಿ ದಾವಾಸ್ವತ್ತಿನ ಪಶ್ಚಿಮದ ಕಡೆ ಪ್ರತಿವಾದಿಯು ದನದ ಕೊಟ್ಟಿಗೆ ಹಾಗೂ ಮನೆ ಇರುತ್ತದೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಾನು ತೋರಿಸಿದ ದಾವಾಸ್ವತ್ತಿನ ವಿಸ್ತೀರ್ಣದಲ್ಲಿರುತ್ತೇನೆ ಹಾಗೂ ವಿಸ್ತೀರ್ಣವನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಪಿ-7 ರಲ್ಲಿ ಇರುವ ಗೋಡೆ ನನ್ನ ಮನೆಯದ್ದು ಆಗಿರುತ್ತದೆ. ಅದರಲ್ಲಿ ಕಟ್ಟಲಾಗುತ್ತಿರುವ ಕಟ್ಟಡವನ್ನು ಪ್ರತಿವಾದಿಯು ನನ್ನ ಖಾಲಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆಯನ್ನು ಕಟ್ಟಿರುತ್ತಾರೆ. ಸಾಕ್ಷಿಗೆ 1 ಛಾಯಚಿತ್ರವನ್ನು ತೋರಿಸಲಾಗಿ ಸದರಿ ಛಾಯಚಿತ್ರದ ಮನೆ ಪ್ರತಿವಾದಿಯ ಮನೆಯಾಗಿರುತ್ತದೆಂದು ನುಡಿದಿರತ್ತಾರೆ. ಸದರಿ ಮನೆಯನ್ನು ಕಟ್ಟಿ 4 ವರ್ಷಗಳಾಯಿತು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.

ನ್ಯಾಯಾಲಯಕ್ಕೆ ನನ್ನ ಮನೆಯ ಸಂಪೂರ್ಣವಾದ ಛಾಯಚಿತ್ರವನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ. ನಿಪಿ-7 ಮತ್ತು 8 ರಲ್ಲಿ ಇರುವ ನನ್ನ ಮನೆಯ ಗೋಡೆಗೆ ನಾನು ಯಾವುದೇ ಬಾಗಿಲು ಮತ್ತು ಕಿಟಕಿಗಳನ್ನು ಹಾಕಿಕೊಂಡಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ನನ್ನ ಮನೆ ಮತ್ತು ಪ್ರತಿವಾದಿಯ ಮನೆಯ ಮದ್ಯೆ ಇರುವ 3 ಅಡಿ ಜಾಗವು

ಪ್ರತಿವಾದಿಯರಿಗೆ ಸೇರಿದ್ದಾಗಿರುತ್ತದೆ ಹಾಗೂ ಅದನ್ನು ಓಡಾಡಲು ಪ್ರತಿವಾದಿಯರು ಬಿಟ್ಟಿರುತ್ತಾರೆಂದರೆ ಸರಿ.

ಪ್ರತಿವಾದಿಯು ಅವರ ಜಾಗದಲ್ಲಿ ಮನೆ ಕಟ್ಟಿಕೊಂಡು ಇರುತ್ತಾರೆ. ಆಗಿದಿದ್ದರೂ ಸಹ ಅವರಿಗೆ ತೊಂದರೆ ಕೊಡು ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ದಾವೆಯನ್ನು ಮನೆ ಕಟ್ಟುವುದನ್ನು ತಡೆಹಿಡಿಯಬೇಕೆಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿ. ನನ್ನ ಮಧ್ಯಂತರ ಅರ್ಜಿ ವಜಾಗೊಂಡ ನಂತರ ನಾನು ಓ ಎಸ್ ನಂ.183/2022 ರಲ್ಲಿ ಹೊಸದಾಗಿ ಮತ್ತೊಂದು ದಾವೆಯನ್ನು ಹೂಡಿರುತ್ತೇನೆಂದರೆ ಸರಿ. ಆ ದಾವೆಯಲ್ಲಿಯೂ ಸಹ ನನಗೆ ಮಧ್ಯಂತರ ಅರ್ಜಿಯಲ್ಲಿ ನನ್ನ ಪರವಾಗಿ ಆದೇಶವಾಗಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿಯು ಮನೆ ಕಟ್ಟಿಕೊಂಡಂತಹ ಜಾಗವು ಅವರ ತಾತನ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾತನವರಿಗೆ ಪ್ರತಿವಾದಿಯು ಕಟ್ಟಿಕೊಂಡಂತಹ ಮನೆಯು 1949 ರಲ್ಲಿ ಆದಂತಹ ಪಾಲು ಪಟ್ಟಿಯಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಹಾಗೂ ಅವರ ಪೂರ್ವಜರು ಅವರ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುತ್ತಾರೆ. ನನ್ನ ಮನೆಯ ಗೋಡೆಯ ನಂತರ 3 ಅಡಿ ಜಾಗವನ್ನು ಪ್ರತಿವಾದಿಯ ಬಿಟ್ಟು ಪೂರ್ವ – ಪಶ್ಚಿಮ 17 ಅಡಿ, ಉತ್ತರ – ದಕ್ಷಿಣ 30 ಅಡಿ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ದಾವಾಸ್ವತ್ತು ನನ್ನದು ಎಂದು ತೋರಿಸಲು ಯಾವುದೇ ದಾಖಲೆ ಯನ್ನು ಸಲ್ಲಿಸಿರುವುದಿಲ್ಲ, ಪ್ರತಿವಾದಿಯ ಜಾಗವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ವತ್ತಿನ ಪಶ್ಚಿಮದ ಕಡೆ ಪ್ರತಿವಾದಿಯ ಮತ್ತು ಅವರ ತಾತನ ಜಾಗವಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**